# ಉನ್ನತ ಶಿಕ್ಷಣದಲ್ಲಿ ಹಳಗನ್ನಡ ಜ್ಞಾನ ವಿಷಯಕ ಶಾಸ್ತ್ರ ಕೃತಿಗಳು

– ಮಂಜಪ್ಪ ಸಿ.(ಮಂಜುಕುರ್ಕಿ)

ಕನ್ನಡ ಸಾಹಿತ್ಯದಲ್ಲಿ ಶಾಸ್ತ್ರಸಾಹಿತ್ಯವು ಕನ್ನಡಿಗರ ಲೌಕಿಕ ಬದುಕಿನ ಜ್ಞಾನ ವಿಷಯಕ ಸಂಪತ್ತು ಇಂತಹ ಸಂಪತ್ತು ಉನ್ನತ ಶಿಕ್ಷಣದಲ್ಲಿ ಪಠ್ಯಗಳಾಗಿ ಅಳವಡಿಸುವುದರ ಮೂಲಕ ಶಿಕ್ಷಣ ಜೀವನಕ್ಕಾಗಿ; ಜೀವನದುದ್ದಕ್ಕೂ ಕಲಿಯುವ; ಕಲಿತದ್ದನ್ನು ಜೀವನದಲ್ಲಿ ಅಳವಡಿಸುವ ಕಲ್ಪನೆ ನಮ್ಮಲ್ಲಿ ಮಾನ್ಯತೆ ಪಡೆಯಬೇಕು. ಶಿಕ್ಷಣವು ಆತ್ಮಾನಂದ ಇಲ್ಲವೆ ಆತ್ಮಸಾಕ್ಷಾತ್ಕರಕ್ಕೆ ಸಹಾಯ ಮಾಡಬೇಕೆಹೊರತು ಆದರೆ ಕೇವಲ ವಸ್ತುವಿಷಯಕ ಜ್ಞಾನಾರ್ಜನೆಗೆ ಸಹಾಯ ಮಾಡುವುದು ಶಿಕ್ಷಣವಲ್ಲ. ಶಿಕ್ಷಣ ಪ್ರಮುಖವಾಗಿ ವ್ಯಕ್ತಿಗೆ ಸಂಬಂಧಿಸಿರುವುದರಿಂದ ಮತ್ತು ವ್ಯಕ್ತಿಯು ಶಿಕ್ಷಣದ ಕೇಂದ್ರವಾಗಿರುವುದರಿಂದ ಶಿಕ್ಷಣವು ಸಹ ಅವಶ್ಯಕ(ವ್ಯಕ್ತಿಗತ)ವಾಗಿದೆ. ಅದು ಗುರು–ಶಿಷ್ಯ ಇವರಲ್ಲಿಯ ಬಾಂಧವ್ಯವಾಗಿರಬಹುದು.

ಶಿಕ್ಷಣವು ಜೀವನದುದ್ದಕ್ಕೂ ಸಾಗುವ ಅಖಂಡ ಪ್ರವಾಹ ಪರಿಸ್ಥಿತಿ ಪ್ರಸಂಗ ಪರಿಸರಗಳ ಮೂಲಕ ಕಾಲಕಾಲಕ್ಕೆ ಬದಲಾಗುವ ಮಾನವ ಜೀವನದ ಬೇಕು–ಬೇಡಿಕೆಗಳನ್ನು ಪೂರೈಸಿ ಅದನ್ನು ಪರಿಶುದ್ಧಗೊಳಿಸಬೇಕಾದರೆ ಆಯಾಕಾಲದ ಶಿಕ್ಷಣವು ಸಹ ಮಾರ್ಪಾಡನ್ನು ಹೊಂದುವುದು ಅನಿವಾರ್ಯವಾಗಿದ್ದರು ಕೂಡ ಪಠ್ಯಕ್ರಮ, ಬೋಧನಪದ್ಧತಿ, ಕಲಿಸುವ ವಿಧಾನ, ಉಪನ್ಯಾಸಕರ ಅರ್ಹತೆಗಳು, ಅಧ್ಯಯನದ ನಿಯಮ–ನಿಬಂಧನೆಗಳು ಇವುಗಳನ್ನು ಸಂಕ್ಷೀಪ್ತಗೊಳಿಸುವುದರಿಂದ ಶಿಕ್ಷಣದ ಮೌಲ್ಯವನ್ನು ಅಪಮೌಲ್ಯೀಕರಿಸಿದಂತಾಗುತ್ತದೆ.

ಪ್ರಸ್ತುತ ದಿನಗಳ ಶಿಕ್ಷಣದಲ್ಲಿ ಅದರಲ್ಲೂ ಉನ್ನತ ಶಿಕ್ಷಣದ ಕನ್ನಡ ಪಠ್ಯವನ್ನೇ ಕೇಂದ್ರಿಕರಿಸಿ ಹೇಳುವುದಾದರೆ ಇಂದಿನ ಪಠ್ಯವಿಷಯಗಳು ತುಣುಕು–ತುಣುಕಾಗಿ ಅಳವಡಿಸಲಾಗುತ್ತಿದ್ದು, ಮುಖ್ಯವಾಗಿ ಹಳಗನ್ನಡ ಪಠ್ಯಗಳ ಅಳವಡಿಕೆಯಲ್ಲಿ ಕರ್ನಾಟಕದ ಪ್ರತಿಯೊಂದು ವಿಶ್ವವಿದ್ಯಾಲಯಗಳು ತಾತ್ಸಾರವನ್ನು ತೋರಿಸುತ್ತಿರುವುದು ವಿಷಾದನೀಯವೆಂದೇ ಹೇಳಬಹುದು. ಇತ್ತೀಚಿನ ಪಠ್ಯಕ್ರಮಗಳಲ್ಲಿ ಹಳಗನ್ನಡ ಪಠ್ಯಗಳ ಅಳವಡಿಕೆಗಳನ್ನು ಗಮನಿಸುವುದಾದರೆ ಸಾಂಪ್ರದಾಯಿಕ ಪಠ್ಯಗಳೆಂಬಂತೆ ಪಂಪ, ರನ್ನ, ಜನ್ನ, ನಾಗವರ್ಮ, ನಾಗಚಂದ್ರರ ಕೃತಿಗಳ ಕೆಲವು ಆಯ್ದಭಾಗಗಳನ್ನಷ್ಟೇ ಅಳವಡಿಸಲಾಗುತ್ತಿದ್ದು ಅವುಗಳು ಕೂಡ ಒಂದು ಕೃತಿಯ ಅಪೂರ್ಣಭಾಗವಾಗಿರುವುದರ ಜೊತೆಗೆ ಅದೇ ರಾಮಯಾಣ, ಮಹಾಭಾರತ ವಿಷಯಗಳನ್ನೇ ಪ್ರಸ್ತಾಪಿಸುತ್ತವೆ. ಇದರಿಂದ ಪ್ರಾಚೀನ ಹಳಗನ್ನಡ ಕೃತಿಗಳ ಮೌಲ್ಯವನ್ನು ಮೌಲ್ಯಿಕರಿಸಿದಂತಾಗದು. ಪ್ರಾಚೀನ ಹಳಗನ್ನಡ ಕೃತಿಗಳ ಮೌಲ್ಯಗೊಳ್ಳಬೇಕಾದರೆ ಜ್ಞಾನ ವಿಷಯಕ ಶಾಸ್ತ್ರಕೃತಿಗಳನ್ನು ಉನ್ನತ ಶಿಕ್ಷಣದಲ್ಲಿ ಪಠ್ಯಗಳಾಗಿ ಅಳವಡಿಕೆಯಾಗಬೇಕು.

ಪ್ರಸ್ತುತ ದಿನಗಳಲ್ಲಿ ಹಳಗನ್ನಡ ಅಧ್ಯಯನ ಎನ್ನುವುದು ಕಠಿಣವೆಂಬಂತ ಮನೋಸ್ಥಿತಿ ಉಂಟಾಗುತ್ತಿದೆ, ಕಾರಣ ಹಳಗನ್ನಡ ಬೋಧಿಸುವುವರ ಕೊರತೆ ಎದ್ದು ಕಾಣುತ್ತಿದೆ. ಹಳಗನ್ನಡ ಅಧ್ಯಯನದ ಕೊರತೆಯಿಂದಾಗಿ ಉಪನ್ಯಾಸಕರಲ್ಲಿ ಹಳಗನ್ನಡದ ಸರಿಯಾದ ಜ್ಞಾನ ಇಲ್ಲದೆ ಇರುವ ಕಾರಣ ಹಳಗನ್ನಡವನ್ನು ನಿರಾಕರಿಸಲಾಗುತ್ತಿದೆ. ಇನ್ನೂ ವಿದ್ಯಾರ್ಥಿಗಳಿಗೆ ಇದೊಂದು ಸಾಹಸದ ಪಠ್ಯ ವಿಷಯಗಳೇ ಆಗಿ ಪರಿಣಮಿಸಿವೆ. ವಿದ್ಯಾರ್ಥಿಗಳ ಮುಖ್ಯ ಸಮಸ್ಯೆ ಎಂದರೆ ಅರ್ಥೈಸುವಿಕೆ

ಹಳಗನ್ನಡ ಪಠ್ಯಗಳನ್ನು ಅರ್ಥೈಸಿಕೊಳ್ಳಲು ಆ ಪಠ್ಯಗಳನ್ನು ಜೀರ್ಣಿಸಿಕೊಳ್ಳಲು ಸಾಧ್ಯವೇ ಇಲ್ಲವೆಂಬಂತೆ ವಿದ್ಯಾರ್ಥಿಗಳು ಹಳಗನ್ನಡ ಪಠ್ಯಗಳನ್ನು ನಿರಾಕರಿಸುತ್ತಿದ್ದಾರೆ.

ಒಂದು ವೇಳೆ ಹಳಗನ್ನಡ ಪಠ್ಯಗಳನ್ನು ಅಳವಡಿಸಿದ್ದರೂ ಅವುಗಳನ್ನು ಓದುವುದು ಅಷ್ಟಕ್ಕಷ್ಟೇ ಹಳಗನ್ನಡ ಪಠ್ಯಕ್ಕೆ ಸಂಬಂಧಿಸಿದ ಗೈಡ್‌ಗಳನ್ನು ಓದಿ ಅರ್ಥೈಸುವಿಕೆ ಪ್ರಸ್ತುತ ವಿದ್ಯಾರ್ಥಿಗಳ ಮನೋಸ್ಥಿತಿ ಆದರೆ ಹೇಗಾದರು ಓದಿ ಪರೀಕ್ಷೆ ಬರೆಯಲಿ ಪಠ್ಯಗಳನ್ನು ಮುಗಿಸಿದರೆ ಸಾಕೆಂಬುದು ಉಪನ್ಯಾಸಕರ ಮನಸ್ಥಿತಿ. ಇವುಗಳಿಗೆಲ್ಲ ಕಾರಣ ತೋರಿಸುವುದು ವಿಶ್ವವಿದ್ಯಾಲಯಗಳ ಸೇಮಿಸ್ಟರ್ ಪದ್ಧತಿಗಳು. ಈ ಕಾರಣದಿಂದಾಗಿಯೂ ಹಳಗನ್ನಡ ಪಠ್ಯದ ಅಳವಡಿಕೆಯಲ್ಲಿ ಇಂತಹ ಪ್ರಸಂಗಗಳು ಉಂಟಾಗುತ್ತಿವೆ.

ಹಳಗನ್ನಡದ ಮೇಲಿನ ತಾತ್ಸಾರದ ಮನೋಸ್ಥಿತಿ ದೂರವಾಗಬೇಕಾದರೆ ಪ್ರಾಚೀನ ಕೃತಿಗಳ ಮಹತ್ವವನ್ನು ಅವುಗಳ ಮೌಲ್ಯವನ್ನು ಅರ್ಥೈಸಿಕೊಳ್ಳಬೇಕಾಗುತ್ತದೆ, ಪ್ರಾಚೀನ ಕೃತಿಗಳಲ್ಲಿ ಹೇಳದೇ ಇರುವ ವಿಷಯವೇ ಇಲ್ಲ ಅಂತಹ ವಿಷಯಗಳನ್ನು ಗಮನಿಸಿ ಹೇಳುವುದಾದರೆ. ಹಳಗನ್ನಡ ಕೃತಿಗಳಲ್ಲಿ ಕೇವಲ ರಾಮಯಾಣ, ಮಹಾಭಾರತದ ವಸ್ತು ಕುರಿತ ಕೃತಿಗಳಷ್ಟೇ ಅಲ್ಲ ಅಲಂಕಾರ, ಛಂದಸ್ಸು, ವ್ಯಾಕರಣ, ವ್ಯವಹಾರಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಯೋಗಶಾಸ್ತ್ರ, ಜ್ಯೋತಿಷ್ಯಶಾಸ್ತ್ರ, ವೈದ್ಯಶಾಸ್ತ್ರ, ಸೂಪಶಾಸ್ತ್ರ, ಅಶ್ವಶಾಸ್ತ್ರ, ರತ್ನಶಾಸ್ತ್ರ, ಗಜಶಾಸ್ತ್ರ, ಸಂಗೀತಶಾಸ್ತ್ರ, ಗಣಿತಶಾಸ್ತ್ರ ಇನ್ನೂ ಮುಂತಾದ ವಿಷಯಗಳನ್ನೊಳಗೊಂಡಂತಹ ಕೃತಿಗಳನ್ನು ಹಳಗನ್ನಡದಲ್ಲಿ ಕಾಣಬಹುದು.

ಇಂತಹ ಕೃತಿಗಳನ್ನು ಉನ್ನತ ಶಿಕ್ಷಣದ ಪಠ್ಯಗಳಲ್ಲಿ ಅಳವಡಿಸುವುದರಿಂದ ಉನ್ನತ ಶಿಕ್ಷಣವನ್ನು ಪಡೆಯುವ ವಿದ್ಯಾರ್ಥಿಗಳಿಗೂ ಒಂದು ಉನ್ನತ ಮಟ್ಟದ ಜ್ಞಾನ ದೊರಕುವುದರ ಜೊತೆಗೆ ಭವಿಷ್ಯದಲ್ಲಿ ಇವುಗಳ ಉಪಯೋಗವಾಗುತ್ತದೆ. ಅದರೊಂದಿಗೆ ಕನ್ನಡ ಸಾಹಿತ್ಯದ ಪ್ರಾಚೀನ ಕೃತಿಗಳ ಮಹತ್ವವು ಬಹುಮಟ್ಟಿಗೆ ಗುರುತಿಸಿದಂತಾಗುತ್ತದೆ. ಹಾಗಾಗಿ ಈ ಮೇಲಿನ ವಿಷಯಗಳನ್ನು ಪ್ರತಿನಿಧಿಸುವ ಕೃತಿಗಳು ಕನ್ನಡದ ಪ್ರಾಚೀನ ಸಾಹಿತ್ಯದಲ್ಲಿ ರಚನೆಗೊಂಡಿದ್ದು, ಇಂತಹ ಕೃತಿಗಳನ್ನು ಗುರಿತಿಸುವುದಾದರೆ

- ಶ್ರೀವಿಜಯ - ಕವಿರಾಜಮಾರ್ಗ
- ಕೇಶಿರಾಜ – ಶಬ್ಧಮಣಿದರ್ಪಣ
- ಒಂದನೇ ನಾಗವರ್ಮ – ಛಂದೋಂಬುಧಿ
- ಎರಡನೇ ಚಾವುಂಡರಾಯ– ಲೋಕೋಪಕಾರ
- ಕೀರ್ತಿವರ್ಮ – ಗೋವೈದ್ಯ
- ಜಗದ್ದಳ ಸೋಮನಾಥ– ಕರ್ನಾಟಕ ಕಲ್ಯಾಣಕಾರಕ
- ಒಂದನೇ ಮಂಗರಸ – ಖಗೇಂದ್ರಮಣಿದರ್ಪಣ
- ಸಾಳ್ವ – ವೈದ್ಯಸಾಂಗತ್ಯ
- ಸೈಗೊಟ್ಟ ಶಿವಮಾರ – ಗಜಾಷ್ಟಕ

- ಅಭಿನವ ಚಂದ್ರ – ಅಶ್ವಶಾಸ್ತ್ರ
- ಮೂರನೇ ಮಂಗರಸ – ಸೂಪಶಾಸ್ತ್ರ
- ರಾಜಾದಿತ್ಯ – ಗಣಿತಶಾಸ್ತ್ರ
- ಪಾರ್ಶ್ವದೇವ – ಸಂಗೀತಮಯಸಾರ
- ಚಲುವ – ರತ್ನಶಾಸ್ತ್ರ
- ಶ್ರೀಧರಚಾರ್ಯ – ಜಾತಕತಿಲಕ

ಇನ್ನೂ ಅನೇಕ ಮೌಲ್ಯಯುತವಾದ ಹಳಗನ್ನಡ ಕೃತಿಗಳು ಕನ್ನಡ ಸಾಹಿತ್ಯದಲ್ಲಿ ದೊರೆಯುತ್ತವೆ. ಇವುಗಳ ಯಾವ ಕೃತಿಗಳು ಉನ್ನತ ಶಿಕ್ಷಣದಲ್ಲಿ ಪಠ್ಯಗಳಾಗಿ ಅಳವಡಿಸದೇ ಇರುವುದು ಪಶ್ನಾರ್ಥವಾಗಿದೆ. ಇಂತಹ ಹಳಗನ್ನಡ ಜ್ಞಾನ ವಿಷಯಕ ಶಾಸ್ತ್ರಕೃತಿಗಳ ಮಹತ್ವವನ್ನು ತಿಳಿಸುವ ದೃಷ್ಟಿಯಿಂದ ಪ್ರಸ್ತುತ ಈ ಲೇಖನದಲ್ಲಿ ಒಂದು ಕೃತಿಯನ್ನು ಪ್ರಸ್ತಾಪಿಸುವ ಪ್ರಯತ್ನಮಾಡಲಾಗಿದೆ.

**ಎರಡನೇ ಚಾವುಂಡರಾಯನ 'ಲೋಕೋಪಕಾರ'**

ಲೋಕೋಪಕಾರ ಒಂದು ಸರ್ವಶಾಸ್ತ್ರ ಸಂಗ್ರಹ ಗ್ರಂಥ ಮನುಷ್ಯನ ನಿತ್ಯಜೀವನಕ್ಕೆ ಉಪಯುಕ್ತವೂ ಅತ್ಯವಶ್ಯಕವೂ ಆದ ಸಂಗತಿಗಳನ್ನು ಈ ಗ್ರಂಥ ಒಳಗೊಂಡಿದೆ. ಪಂಚಾಂಗಫಲ, ನವಪಟಲ, ವಾಸ್ತು, ಉತ್ಪಾತ, ಉದಕಾರ್ಗಳ(ಜಲಶೋಧನೆ), ತೋಟಗಾರಿಕೆ, ಸುಗಂಧ ತೈಲ, ಸೂಪಶಾಸ್ತ್ರ, ವೈದ್ಯಶಾಸ್ತ್ರ, ವಿಷವೈದ್ಯ, ಸರ್ವಲಕ್ಷಣ ಶಕುನ ಈ ವಿಷಯಗಳು ಲೋಕೋಪಕಾರಗ್ರಂಥದ ೧೨ ಅಧಿಕಾರಗಳಲ್ಲಿ ನಿರೂಪಿತವಾಗಿದೆ. ಪಂಚಾಂಗಫಲ ವರ್ಣನೆಯಿಂದ ಪ್ರಾರಂಭವಾಗಿ ಶಕುನಾದಿಪ್ರಕರಣಕ್ಕೆ ಮುಕ್ತಾಯಗೊಂಡಿದೆ.

ಪ್ರಥಮ ಪ್ರಕರಣ ಪಂಚಾಂಗಫಲ ವರ್ಣನೆ ಇಲ್ಲಿ ತಿಥಿ, ವಾರ, ನಕ್ಷತ್ರ, ಯೋಗ, ಕರಣ ಈ ಪಂಚಾಂಗಗಳ ಶುಭಾಶುಭತೆಯನ್ನು ಈ ತಿಥಿ, ವಾರ, ನಕ್ಷತ್ರಗಳಲ್ಲಿ ಕೈಗೊಳ್ಳಬೇಕಾದ ಕಾರ್ಯಗಳನ್ನು ಹೇಳಿದ್ದಾನೆ. ಎರಡನೇ ಪ್ರಕರಣ ನವಪಟಲ ಅಧಿಕಾರದಲ್ಲಿ ವಿವಾಹಾದಿ ಷೋಡಶ ಕರ್ಮಗಳನ್ನು ನೇರವೇರಿಸುವುದಕ್ಕಿರುವ ಶುಭಕರವಾದ ತಿಥಿ ಲಗ್ನಾದಿಗಳ ಪ್ರಸ್ತಾಪವಿದೆ. ಮೂರನೇ ಪ್ರಕರಣ ವಾಸ್ತು ಅಧಿಕಾರದಲ್ಲಿ ಮಾನವನ ಮೂಲಭೂತ ಅವಶ್ಯಕತೆಗಳಲ್ಲೊಂದಾದ ಗೃಹ ನಿರ್ಮಾಣದ ವಿಚಾರಗಳು ಬಂದಿವೆ. ನಾಲ್ಕನೇಯದಾದ ಉತ್ಪಾತ ಅಧಿಕಾರಲ್ಲಿ ಸಮಸ್ತ ಪ್ರಾಣಿಸಂಕುಲಕ್ಕೆ ಕೇಡನ್ನು ಸೂಚಿಸುವ ಉತ್ಪಾತಗಳನ್ನು ದಿವ್ಯ, ಅಂಬರ, ಬೌಮ ಎಂದು ಮೂರುಬಗೆಯಾಗಿ ವಿಂಗಡಿಸಿ ಆಯಾಯ ಉತ್ಪಾತಗಳಿಗೆ ಶಾಂತಿಯನ್ನು ಸೂಚಿಸಿರುವನು. ಐದನೇಯ ಉದಕಾರ್ಗಳ ಪ್ರಕರಣದಲ್ಲಿ ಸಕಲ ಜೀವರಾಶಿಗಳಿಗೂ ಅತ್ಯಅಗತ್ಯವಾದ ನೀರಿನ ಭೂಮ್ಯಂತರ್ಗತ ನೆಲೆಯನ್ನು ಅರಿಯುವ ಬಗೆಯನ್ನು ಹೇಳಿದೆ ಗಿಡ ಮರಗಳ ನೆರವಿನಿಂದ ಭೌಗೋಳಿಕ ವಿಧಾನದಿಂದ ಅಂತರ್ಜಲವನ್ನು ಕಂಡುಹಿಡಿಯುವಬಗೆ ನಿಧಿ, ನೀರು ಸಿಗುವ ಸ್ಥಳ, ಬಾವಿತೊಡುವಾಗ ಸಿಗುವ ಅರೆಬಂಡೆಯನ್ನು ಹೊಡೆದು ತೆಗೆಯುವ ವಿಧಾನ ಉಳಿಗಳನ್ನು ವಜ್ರದಂತೆ ಕಾಠಿಣ್ಯಗೊಳಿಸುವ ರೀತಿ ಇಲ್ಲಿ ನಿರೂಪಿತವಾಗಿದೆ. ಭೂಮಿಯೊಳಗೆ ನೀರು ದೊರೆಯುವ ಲಕ್ಷಣವನ್ನು ಒಂದು ಪದ್ಯದ ಮೂಲಕ ಹೇಳಲಾಗಿದೆ.

ನೆಲನಂ ಘಟ್ಟಿಸಿ ಶಬ್ಧಮಬ್ದರಿಪೊಡಂ ಮೇಣ್ ಮಿಂಚುವೆತ್ತಿರ್ಪೊಡಂ

ಶಿಲೆಗಳ್ ಬೆಳ್ವಸೆದಿರ್ಪೊಡಂ ತರುಗಳೊಳ್ ನಿಂದೊಂದು ಕೊಂಬಾವಗಂ

ನೆಲನಂ ಮೋದುವಡಂ ಬೆಳೆತ್ತೋಡಮದರ್ಕೆಂ ಸಂದೆಯಂ ನಿಶ್ಚಯಂ

ಜಲಮಕ್ಕುಂ ಪುರುಷದ್ವಯ ಪ್ರಮಿತದೊಳ್ ಶ್ರೀ ಶಿಷ್ಟಕಲ್ಪದ್ರುಮಾ (ಅ.೫,ಪ.೧೩)

ಆರನೆಯದಾದ ವೃಕ್ಷಾಯುರ್ವೇದ ಪ್ರಕರಣ ಇಲ್ಲಿ ಬೀಜ, ಪರಿಷ್ಕರಕ್ರಮ, ಕ್ರಿಮಿ–ಕೀಟನಾಶಕ ವಿಧಾನ, ಫಲವೃಕ್ಷಲತೆಗಳು ಅಧಿಕ ಫಲ ಕೊಡುವಂತೆ ಮಾಡುವ ಪ್ರಯೋಗ ಇಲ್ಲಿ ತಿಳಿಸಲಾಗಿದೆ. ಉದಾಹರಣೆಗೆ ತೆಂಗು ಅಧಿಕ ಫಲಕೊಡುವಂತೆ ಮಾಡಲು ಅನುಸರಿಸಬೇಕಾದ ಒಂದು ವಿಧಾನ ಹೀಗೆ ಹೇಳಲಾಗಿದೆ.

ತಿಲಮಗಸೆ ವಿಳಂಗಂ ಸಿಂ

ಧು ಲವನಮಿವನರೆದು ಜೇನುಘೃತಮಧ್ಯಮುಮಂ

ಕಲಸಿ ನಿಶಾಮುಖದೊಳ್ ಮೂ

ಲ ಲೇಪನಂಗಯ್ಯೆ ತೆಂಗು ಬಹುಫಲಮಕ್ಕುಂ (ಅ.೬,ಪ.೩೨)

ಅಂದರೆ ಎಳ್ಳು, ಅಗಸೆಬಿತ್ತು, ವಿಳಂಗ, ಸೈಂಧವಲವಣ ಇವನ್ನು ಒಂದಾಗಿ ಅರೆದು ಜೇನುತುಪ್ಪ ಮತ್ತು ಮಧ್ಯದೊಡನೆ ಕಲಸಿ ತೆಂಗಿನ ಮರದ ಬೊಡ್ಡೆಗೆ ಬಳಿಯುವುದರಿಂದ ಅಧಿಕ ಫಲ ಬಿಡುವುದು ಎಂದು ತಿಳಿಸಲಾಗಿದೆ. ಏಳನೆಯದಲ್ಲಿ ಗಂಧಯುಕ್ತಿ ಪ್ರಕರಣದಲ್ಲಿ ಸಂಪಿಗೆ, ಪಾದರಿ, ಜಾಜಿ, ಮಲ್ಲಿಗೆ, ಕಸ್ತೂರಿ ಇತ್ಯಾದಿ ಬಗೆಬಗೆಯ ಸುಗಂಧ ದ್ರವ್ಯಗಳನ್ನು ತಯಾರಿಸುವ ಬಗೆಯನ್ನು ಹೇಳಿರುವನು. ಎಂಟನೆಯ ಸೂಪಶಾಸ್ತ್ರ ಪ್ರಕರಣದಲ್ಲಿ ಬಗಬಗೆಯ ಭಕ್ಷ್ಯಬೋಜ್ಯ ಪಾನೀಯಗಳ ಮಾಡುವ ವಿಚಾರಗಳು ವರ್ಣಿತವಾಗಿವೆ. ಒಂಬತ್ತನೆಯದು ನರಾದಿವೈದ್ಯ ಪ್ರಕರಣ ಇಲ್ಲಿ ಸಾಮಾನ್ಯವೈದ್ಯ, ಪುರುಷವೈದ್ಯ, ಸ್ತ್ರೀವೈದ್ಯ, ಬಾಲವೈದ್ಯ, ಗೋವೈದ್ಯ, ಗಜವೈದ್ಯ, ಅಶ್ವವೈದ್ಯ ಎಂಬ ಉಪಶಾಖೆಗಳಿವೆ ಬುದ್ಧಿವರ್ಧನಕ್ಕೆ ಹೇಳಿರುವ ಔಷಧ ಒಂದು ಹೀಗಿದೆ.

ಘೃತಮಧುಸಹಿತಂ ಬಜೆಯಂ

ಸಿತಮಂ ನೆಲ್ಲಿಯುಮನಿರ್ಪತ್ತೊಂದುದಿನಂ

ಸತತಮುಪಯೋಗಿಸುತಿರ್ದಂ

ಡತಿಶಯಮೇಧಾವಿಯಕ್ಕುಮಚಳಿತವಚನಾ

ತುಪ್ಪ, ಬಜೆ, ಬೆಲ್ಲ, ನೆಲ್ಲಿಯ ಚಟ್ಟು ಇವನ್ನು ಜೇನುತುಪ್ಪದಲ್ಲಿ ಬೆರೆಸಿ ೨೧ ದಿನ ಉಪಯೋಗಿಸಿದರೆ ಖಂಡಿತವಾಗಿಯೂ ಅತಿಶಯ ಮೇಧಾವಿಯಾಗುವನು. ಹತ್ತನೆಯ ವಿಷವೈದ್ಯದಲ್ಲಿ ಹಾವು, ಚೇಳು, ಹುಚ್ಚುನಾಯಿ, ಮೊದಲಾದ ವಿಷಜಂತು ಕಚ್ಚಿದಾಗ ಉಂಟಾಗುವ ಪರಿಣಾಮಗಳೊಂದಿಗೆ ಪರಿಹಾರಗಳನ್ನು ತಿಳಿಸಿದ್ದಾನೆ, ಕೊನೆಯದಾಗಿ

ಶಕುನಾದಿ ಪ್ರಕರಣದಲ್ಲಿ ಸರ್ವಶಕುನಗಳನ್ನು ಶುಭಶಕುನ ದುಶ್ಯಕುನಗಳೆಂದು ವಿಂಗಡಿಸಿ ಆಯಾಯ ಶಕುನಗಳಿಂದ ಸೂಚಿತವಾಗುವ ಶುಭಾಶುಭ ಫಲ ವಿಚಾರಗಳನ್ನು ಹೇಳಿರುವನು. ಹೀಗೆ ಮನುಷ್ಯನ ಜೀವನಕ್ಕೆ ಉಪಯುಕ್ತಗೊಳ್ಳುವಂತಹ ವಿಚಾರಗಳು ಪ್ರಾಚೀನ ಹಳಗನ್ನಡ ಕೃತಿಯಿಂದ ದೊರೆಯುತ್ತವೆ.

ಕನ್ನಡ ಸಾಹಿತ್ಯದಲ್ಲಿ ಲೋಕೋಪಕಾರ ಕೃತಿ ಒಂದೆಯಲ್ಲ ವೈದ್ಯಶಾಸ್ತ್ರವಾದ ಸೋಮನಾಥನ ಕರ್ನಾಟಕ ಕಲ್ಯಾಣಕಾರಕ ಕೃತಿಯಲ್ಲಿ ಜ್ವರಕ್ಕೆ ಮೂಲಕಾರಣವನ್ನು ತಿಳಿಸಿದ ಮೇಲೆ ಆ ಜ್ವರದ ನಿವಾರಣೆಗೆ ಹೇಳಿರುವ ಚಿಕಿತ್ಸಕ್ರಮವೊಂದು ಹೀಗಿದೆ.

ಜ್ವರಾದಿಯೊಳುಪವಾಸಂ

ಜ್ವರಮಧ್ಯದಲಿಗಂಜಿ ಪೇಳ್ವಿಕಷಾಯಂ

ಜ್ವರ ಪಾಕದೊಳಸ್ತಮಿತ

ಜ್ವರದೊಳ್ ಮಲಹರಣಮಿನಿತಿವಾರೋಗ್ಯಕರಂ

ಜ್ವರ ಕಾಣಿಸಿಕೊಂಡ ಆರಂಭದಲ್ಲಿ ಉಪವಾಸವಿರುವುದು ಒಳಿತು, ಜ್ವರ ಬಲಿತ ಮೇಲೆ ಪಥ್ಯಾಹಾರವಾಗಿ ಗಂಜಿ ಸೇವನೆ ಉತ್ತಮ ಬೋಧಿಸಿದ, ಕಷಾಯ ಸೇವನೆಗೆ ಜ್ವರ ಪರಿಹಾರವಾಗುವುದು, ಜ್ವರ ಇಳಿಯುವಾಗ ಮಲಹರಣ ಪದ್ಧತಿ ಕ್ರಮ ಸೂಕ್ತವಾದದ್ದು, ಈ ರೀತಿ ಆರೋಗ್ಯದ ವೈದ್ಯ ವಿಚಾರಗಳು ಈ ಕೃತಿಯಿಂದ ದೊರೆಯುತ್ತದೆ. ಹಾಗೆಯೇ ಇನ್ನೂ ಮುಂತಾದ ಕೃತಿಗಳು ಇಂತಹ ಉಪಯುಕ್ತ ವಿಚಾರಗಳನ್ನು ತಿಳಿಸುವ ಶಾಸ್ತ್ರಗ್ರಂಥಗಳು ಕನ್ನಡ ಪ್ರಾಚೀನ ಹಳಗನ್ನಡ ಸಾಹಿತ್ಯದಲ್ಲಿ ರಚನೆಗೊಂಡಿವೆ. ಅವುಗಳಲ್ಲಿ ಖಗೇಂದ್ರಮಣಿದರ್ಪಣ, ಸೂಪಶಾಸ್ತ್ರ, ಜಾತಕತಿಲಕ, ಅಶ್ವಶಾಸ್ತ್ರ ಮತ್ತು ರಾಜಾದಿತ್ಯನ ವ್ಯವಹಾರಗಣಿತ ಇಂತಹ ಅನೇಕ ಕೃತಿಗಳು ಮನುಷ್ಯನ ಜೀವನಕ್ಕೆ ಅವಶ್ಯಕ ವಿಷಯಗಳಾಗಿವೆ. ಇಂತಹ ವಿಷಯಾಧಾರಿತ ಕೃತಿಗಳನ್ನು ಉನ್ನತ ಶಿಕ್ಷಣದಲ್ಲಿ ಪಠ್ಯಗಳಾಗಿ ಅಳವಡಿಸುವುದರಿಂದ ಇಂದಿನ ಉನ್ನತ ಶಿಕ್ಷಣದ ಗುಣಮಟ್ಟವನ್ನು ಮತ್ತು ಶೈಕ್ಷಣಿಕವಾಗಿ ಯುವ ಪೀಳಿಗೆಯಮೇಲೆ ಶಿಕ್ಷಣವೂ ಮಹತ್ವದ ಪರಿಣಾಮವನ್ನು ಬೀರುವುದರ ಜೊತೆಗೆ ಜೀವನೋಪಯೋಗಿ ಶಿಕ್ಷಣ ನೀಡಿದಂತಾಗುತ್ತದೆ. ಈ ಕಾರಣದಿಂದ ಉನ್ನತ ಶಿಕ್ಷಣ ಮಟ್ಟದಲ್ಲಿ ಪ್ರಾಚೀನ ಜ್ಞಾನವಿಷಯಕ ಶಾಸ್ತ್ರಗ್ರಂಥಗಳೆಂದು ಕರೆಸಿಕೊಳ್ಳುವ ಹಳಗನ್ನಡ ಕೃತಿಗಳನ್ನು ಪಠ್ಯಗಳಾಗಿ ಅಳವಡಿಸಬೇಕೇಂಬುದು ಪ್ರಸ್ತುತ ಲೇಖನದ ಆಶಯವಾಗಿದೆ.

**ಆಕರ ಗ್ರಂಥಗಳು**


೧) ಅಶ್ವಶಾಸ್ತ್ರ :(ಸಂ) ಮಂಜುನಾಥನ್ ಜಿ. ಜಿ, ಕನ್ನಡ ಅದ್ಯಯನ ಸಂಸ್ಥೆ. ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು (೧೯೮೭)

೨) ಕನ್ನಡ ಸಾಹಿತ್ಯ ಚರಿತ್ರೆ, ರಂ.ಶ್ರೀ. ಮುಗಳಿ. ಗೀತಾಬುಕ್ ಹೌಸ್, ಮೈಸೂರು (೨೦೦೭)

೩) ಖಗೇಂದ್ರಮಣಿದರ್ಪಣಂ: (ಸಂ) ಸಣ್ಣಯ್ಯ ಬಿ.ಎಸ್. ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು (೨೦೦೮)

೪) ಚಾವುಂಡರಾಯನ ಲೋಕೋಪಕಾರ: ಒಂದು ಅಧ್ಯಯನ, ರಂಗಸ್ವಾಮಿ ಎ. ದರ್ಶನಕೀರ್ತಿ ಪ್ರಕಾಶನ ಮೈಸೂರು (೧೯೯೭)

೫) ಜಾತಕ ತಿಲಕಂ: (ಸಂ) ಕೃಷ್ಣಜೋಯಿಸ್, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ಮೈಸೂರು. (೧೯೭೭)

೬) ಲೋಕೋಪಕಾರ ಶೇಷಯ್ಯಂಗಾರ್ ಎಚ್. ಮದ್ರಾಸ್ ಓರಿಯಂಟಲ್ ಲೈಬ್ರರಿ (೧೯೫೦)

೭) ವೈದ್ಯಕಂದ : (ಸಂ) ಸಣ್ಣಯ್ಯ ಬಿ ಎಸ್. ಅಭಿನಂದನ ಪ್ರಕಾಶನ ಮೈಸೂರು(೧೯೯೧)

೮) ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ೨, ಬೆಂಗಳೂರು ವಿಶ್ವವಿದ್ಯಾನಿಲಯ ಬೆಂಗಳೂರು

೯) ಸಮುಚಿತ : ರಂಗಸ್ವಾಮಿ ಎ. ದರ್ಶನ ಕೀರ್ತಿ ಪ್ರಕಾಶನ ಮೈಸೂರು (೨೦೦೨)